ASHA BHAT OF RVCE WINS MIS SUPRANATIONAL

ವಿಜಯ ಕರ್ನಾಟಕ (ಲವಲvk)

15th Dec 2014

# ಸುಪ್ರ ಸುಂದರಿ ಆಶಾ ಭಟ್

ವಿಶೇಷ ಸಂದರ್ಶನ




**ಜಾಗತಿಕ ಸೌಂದರ್ಯ ಸ್ಪರ್ಧೆಗಳಲ್ಲಿ ಭಾರತದ ಬೆಡಗಿಯರು ಗೆಲ್ಲುವುದು ಹೊಸದೇನಲ್ಲ. ಆದರೆ ಈ ಬಾರಿ ಮಿಸ್ ಸುಪ್ರನ್ಯಾಶನಲ್ ಕಿರೀಟವನ್ನು ಗೆದ್ದಿದ್ದು ಅಪ್ಪಟ ಕನ್ನಡತಿ ಎನ್ನುವುದು ವಿಶೇಷ.**



**ಶುಭಾ ವಿಕಾಸ್**
shubha.hegde@timesgroup.com

ಕನ್ನಡದ ಕುವರಿ ಇದೀಗ ವಿಶ್ವದ ಸೆಳೆತ. ಸೌಂದರ್ಯ ಸ್ಪರ್ಧೆಯಲ್ಲಿ 71 ದೇಶಗಳ ಬೆಡಗಿಯರನ್ನು ಜಯಿಸಿದ ಆಶಾ ಭಟ್ ಸುಂದರಿಯರಲ್ಲಿ ಸುಂದರಿ. ಭದ್ರಾವತಿಯಂಥ ಚಿಕ್ಕ ಪಟ್ಟಣದ ಯುವತಿ, ಮಿಸ್ ಸುಪ್ರನ್ಯಾಷನಲ್ ಪಟ್ಟಕ್ಕೇರಿ ಭಾರತೀಯ ನಾರಿಯರ ಸೌಂದರ್ಯವನ್ನು ಇಡೀ ವಿಶ್ವದೆದುರಿಟ್ಟು ಅಚ್ಚರಿ ಮೂಡಿಸಿದ್ದಾರೆ.

ಸದ್ಯ ಬೆಂಗಳೂರಿನ ಆರ್.ವಿ. ಕಾಲೇಜಿನಲ್ಲಿ ಎಂಜಿನಿಯರಿಂಗ್ ಓದುತ್ತಿರುವ ಇವರು ಸುಬ್ರಹ್ಮಣ್ಯ ಭಟ್ ಹಾಗೂ ಶ್ಯಾಮಲಾ ಭಟ್ ಅವರ ಪುತ್ರಿ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಪೂರೈಸಿದ್ದು ಭದ್ರಾವತಿಯಲ್ಲಿ. ದಕ್ಷಿಣ ಆಫ್ರಿಕಾ ಮೂಲದ ವರ್ಲ್ಡ್ ಬ್ಯೂಟಿ ಅಸೋಸಿಯೇಷನ್, ಪೋಲೆಂಡ್‌ನ ವಾರ್ಸಾದಲ್ಲಿ ನಡೆಸಿದ ಸ್ಪರ್ಧೆಯಲ್ಲಿ 'ಮಿಸ್ ಸುಪ್ರನ್ಯಾಷನಲ್-2014' ಪ್ರಶಸ್ತಿ ಗೆದ್ದಿದ್ದಾರೆ ಆಶಾ.

2009ರಲ್ಲಿ ಆರಂಭವಾದ ಈ ಸ್ಪರ್ಧೆ ಇದೀಗ 6ನೇ ವರ್ಷಕ್ಕೆ ಕಾಲಿಟ್ಟಿದ್ದು, ಡಿ.5ರಂದು ಅಂತಿಮ ಸ್ಪರ್ಧೆ ನಡೆದಿತ್ತು. ಈ ಪ್ರಶಸ್ತಿ ಭಾರತೀಯಳಿಗೆ ಸಿಕ್ಕ ಮೊದಲ ಸಮ್ಮಾನ ಎನ್ನುವುದು ವಿಶೇಷ. ಆಶಾ ಈ ಖುಷಿಯನ್ನು ಲವಲvkಯೊಂದಿಗೆ ಹಂಚಿಕೊಂಡಿದ್ದಾರೆ.

**■ ಸೌಂದರ್ಯ ಸ್ಪರ್ಧೆಯ ನಿಮ್ಮ ಜರ್ನಿ ಹೇಗಿತ್ತು?**

ತುಂಬ ಕುತೂಹಲದಿಂದ ಕೂಡಿತ್ತು. ಬೇರೆ ದೇಶದ ಸಂಸ್ಕೃತಿ, ಭಾಷೆ ಹೀಗೆ ಹಲವಾರು ವಿಷಯಗಳನ್ನು ಕಲಿತೆ. ಸ್ಪರ್ಧೆಗಳಲ್ಲೆಲ್ಲ ಭಾಗವಹಿಸುವಾಗ ಸವಾಲುಗಳು ಎದುರಾಗುತ್ತಿದ್ದವು. ಹತ್ತಕ್ಕೂ ಹೆಚ್ಚು ಗಂಟೆ ಡಾನ್ಸ್, ಫೋಟೊ ಶೂಟ್, ರ್‍ಯಾಂಪ್ ಅಂತೆಲ್ಲ ವಿಪರೀತ ಸುಸ್ತು ಅನುಭವಿಸಿದ್ದು ಇದೆ.

**■ ಇದಕ್ಕಾಗಿ ನಡೆಸಿದ ತಯಾರಿ?**

ದೇಶವನ್ನು ಪ್ರತಿನಿಧಿಸುವ ಸೌಂದರ್ಯ ಸ್ಪರ್ಧೆಯನ್ನು ಎದುರಿಸುವುದು ಸುಲಭದ್ದಲ್ಲ. ಇಂಥದ್ದೊಂದು ಕಿರೀಟ ಧರಿಸುವಾಗ ಸವೆಸಿದ ಹಾದಿ ತುಂಬ ದೂರದ್ದಲ್ಲ. ಆದರೆ ಅದರ ಉದ್ದಕ್ಕೂ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಸೌಂದರ್ಯ, ಬುದ್ಧಿವಂತಿಕೆ, ನಡತೆಯನ್ನು ಒರೆಗೆ ಹಚ್ಚಿ ನೋಡುವ ಸಮಯ ಅದಾಗಿತ್ತು. ಅದಕ್ಕಾಗಿ ಹಗಲು,ರಾತ್ರಿ ಶ್ರಮಿಸಿದ್ದೆ.

**■ ನಿಮ್ಮ ಬದುಕಿನ ಟರ್ನಿಂಗ್ ಪಾಯಿಂಟ್ ಇದು. ಏನನ್ನಿಸುತ್ತದೆ?**

ನಾನೀಗ ಸಾರ್ವಜನಿಕ ವ್ಯಕ್ತಿ. ಭಾರತದಂಥ ದೇಶವನ್ನು ಪ್ರತಿನಿಧಿಸಿದ್ದೇನೆ. ಹೀಗಾಗಿ ನಾನು ಅನ್ನುವುದಕ್ಕಿಂತ ನಾವು ಅನ್ನುವುದರ ಬಗ್ಗೆ ಮಾತನಾಡುತ್ತೇನೆ. ನನ್ನ ಜನ, ನನ್ನ ದೇಶಕ್ಕಾಗಿ ಬದುಕನ್ನು ಮುಡಿಪಾಗಿಡುತ್ತೇನೆ.

ಮುಂದುವರಿದ ಪುಟ... 04